<u>ದಿನಾಂಕ 11-10-2023 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
**<u>ಪಾಟೀ ಸವಾಲು ಶ್ರೀ.ಎನ್.ಬಿ.ಎಚ್ ವಕೀಲರಿಂದ 2 ನೇ ಎದುರುದಾರ ಪರ</u>**

1. ಅಪಘಾತವು ದಿಃ23.02.2022 ರಂದು ರಾತ್ರಿ 10-00 ಗಂಟೆಗೆ ಕಾಡರಕೊಪ್ಪ ರಸ್ತೆ ಎಸ್.ಬಿ.ಐ ಬ್ಯಾಂಕ ಹತ್ತಿರ ಆಯಿತು. ನಾನು ಮುಧೋಳದಿಂದ ಕಾಡರಕೊಪ್ಪ ಗ್ರಾಮಕ್ಕೆ ಹೊರಟ್ಟಿದ್ದೆ. ಅಪಘಾತಪಡಿಸಿದ ವಾಹನ ಮಹೇಂದ್ರ ಟ್ರಕ್ ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುತಿತ್ತು. ಅಪಘಾತವು ಕಾಡರಕೊಪ್ಪ - ಲೋಕಾಪೂರ ಕ್ರಾಸನಲ್ಲಿ ಆಗಿದೆ. ಕ್ರಾಸನಲ್ಲಿ ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುವ ವಾಹನ ತಿರುವು ಇದ್ದ ಕಾರಣ ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಕ್ರಾಸನಿಂದ ಸ್ವಲ್ಪ ಮುಂದೆ ಎಸ್.ಬಿ.ಐ ಬ್ಯಾಂಕ ಬಳಿ ಅಪಘಾತ ಆಯಿತು ಎಂದು ಹೇಳುತ್ತಾರೆ. ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುವಾಗ ತಿರುವು ಇದ್ದ ಕಾರಣ ನಿಧಾನವಾಗಿ ಮುಖ್ಯ ರಸ್ತೆಯಲ್ಲಿ ಸೇರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ತಿರುವು ಇಲ್ಲ, ಸರಳ ರಸ್ತೆ ಇದೆ ಎಂದು ಹೇಳುತ್ತಾರೆ.

2. ನನ್ನ ವಾಹನವನ್ನು ನಾನೇ ಚಲಾಯಿಸುತ್ತಿದ್ದೆನು. ನನ್ನ ವಾಹನ ನೋಂದಾವಣಿ ಆಗಿರಲಿಲ್ಲ, ಅದಕ್ಕೆ ವಿಮೆ ಇರಲಿಲ್ಲ ಹಾಗೂ ನನಗೆ ವಾಹನ ಚಾಲಯಿಸಲು ಪರವಾನಿಗೆ ಇರಲಿಲ್ಲ ಎಂದರೆ ಸರಿ. ಅಪಘಾತವಾಯಿತು ಎಂದು ಹೇಳುವ ದಿನ ನೀವು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ನಿಮಗೆ ವಾಹನ ಚಾಲಯಿಸಲು ಪರವಾನಿಗೆ ಇಲ್ಲದ ಕಾರಣ ನಿಮಗೆ ವಾಹನ ಚಾಲಯಿಸಲು ಬರುವುದಿಲ್ಲ, ಆ ಕಾರಣದಿಂದ ನಿಮ್ಮ ತಪ್ಪಿನಿಂದಲೇ ಅಪಘಾತ ಆಯಿತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಪಘಾತಪಡಿಸಿದ ವಾಹನ ವೇಗವಾಗಿ ಬಂದಿತು ಎಂದು ಹೇಳುತ್ತಾರೆ. ನೀವು ಪೊಲೀಸ ಠಾಣೆಯಲ್ಲಿ 4 ಸಾವಿರ ರೂಪಾಯಿ ದಂಡ ಕಟ್ಟಿದ್ದೀರಿ ಎಂದರೆ ಸರಿ. ನಿಮ್ಮ ಬಳಿ ವಾಹನ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ನೊಂದಣಿ ಇಲ್ಲ ಎಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದೀರಿ ಎಂದರೆ ಸರಿ.

3. ಸದರಿ ಅಪಘಾತವು ನಿಮ್ಮ ಪ್ರಕಾರ ಹೇಗೆ ನಡೆಯಿತು ಎಂದರೆ ಒಮ್ಮೆಲೆ ಟ್ರಕ್ ನನ್ನ ವಾಹನದ ಮೇಲೆ ಬಂದಿದ್ದರಿಂದ ಅಪಘಾತ ಆಯಿತು ಎಂದು ಹೇಳುತ್ತಾರೆ. ಮಹೇಂದ್ರ ವಾಹನದ ಚಾಲಕನಿಗೆ ಕ್ರಮಬದ್ದ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ

ಎಂದು ಹೇಳುತ್ತಾರೆ. ಫಿರ್ಯಾದನ್ನು ನನ್ನ ದೊಡಪ್ಪನ ಮಗ ಪ್ರಕಾಶ ಮಹಾದೇವ ಚೌದರಿ ಇವರು ದಿಃ23.03.2022 ರಂದ ನೀಡಿರುತ್ತಾರೆ. 1 ನೇ ಎದುರುದಾರ ಟ್ರಕ್ ಮಾಲೀಕ ನಿಮ್ಮ ಪರಿಚಯಸ್ಥನಾಗಿದ್ದರಿಂದ ಅಪಘಾವು ನಿಮ್ಮ ತಪ್ಪಿನಿಂದಲೇ ಆಗಿದ್ದರು ಸಹ ವಿಮೆ ಇದೆ ಎಂದು ಪರಿಹಾರ ಧನ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

4. ನಾನು ಅಪಘಾತವಾದ ಕೂಡಲೇ ಮೊದಲು ಲೋಕಾಪೂರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮುಧೋಳದ ಸಾಯಿಲೀಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ತೀವ್ರವಾದ ಗಾಯಗಳಾದ ಕಾರಣ ಮಿರಜನ ಜಿ.ಎಸ್.ಕುಲಕರ್ಣಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದಿದ್ದೇನೆ. ಲೋಕಾಪೂರ ಸರಕಾರಿ ಅಸ್ಪತ್ರೆಯಲ್ಲಿ ನನಗೆ ಯಾವುದೇ ಚಿಕಿತ್ಸೆ ನೀಡಿಲ್ಲ. ಮುಧೋಳದ ಸಾಯಿಲೀಲಾ ಆಸ್ಪತ್ರೆಯಲ್ಲಿ ನಿಮಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸಾಕ್ಷಿಯು ಪ್ರಥಮ ಚಿಕಿತ್ಸೆ ನೀಡಿ ಸ್ಕ್ಯಾನಿಂಗ ಮಾಡಿ ಎಕ್ಸರೇ ತೆಗೆದು ಮಿರಜಗೆ ಕಳುಹಿಸಿದ್ದಾರೆ. ಸಾಯಿಲೀಲಾ ಆಸ್ಪತ್ರೆಯಲ್ಲಿ ನನಗೆ ಯಾವುದೇ ಆಪರೇಷನ್ ಮಾಡಿಲ್ಲ. ಸಾಕ್ಷಿಗೆ ಈಗ ನಿಪಿ-8 ರ ಬಿಲ್ಲುಗಳಲ್ಲಿ ದಿಃ23.03.2022 ರ ಸಾಯಿಲೀಲಾ ಆಸ್ಪತ್ರೆಯ ಬಿಲ್ಲ ಸಂಖ್ಯೆ 3528 ನ್ನು ತೋರಿಸುತ್ತಿದ್ದು ಪ್ರಥಮ ಚಿಕಿತ್ಸೆಗೆ 61 ಸಾವಿರ ರೂಪಾಯಿಯಷ್ಟು ಬಿಲ್ಲನ್ನು ಹಾಜರಪಡಿಸಿದ್ದು ಅದರಲ್ಲಿ ಸರ್ಜನ ಚಾರ್ಜ, ಪಿ.ಓ.ಓ, ಓ.ಟಿ ಚಾರ್ಜ ಎಂದು ನೀವು ಖೊಟ್ಟಿ ಬಿಲ್ಲನ್ನು ಸಾಯಿಲೀಲಾ ಆಸ್ಪತ್ರೆಯೊಂದಿಗೆ ಮಿಲಾಪಿಯಾಗಿ ಖೊಟ್ಟಿಯಾಗಿ ತಯಾರಿಸಿ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಮಿರಜನಲ್ಲಿಯು ಹೆಚ್ಚಿಗೆ ಮೊತ್ತವನ್ನು ತೋರಿಸಿ ಸುಳ್ಳು ಬಿಲ್ಲನ್ನು ತಯಾರಿಸಿ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಕೇವಲ ಬಿಲ್ಲುಗಳನ್ನು ಹಾಜರಪಡಿಸಿದ್ದು, ಪ್ರಿಸಕ್ರಪಷನ್ ಹಾಜರಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಮಿರಜದಲ್ಲಿ 2 ಆಪರೇಷನಗಳಾಗಿದ್ದು ದಿನಾಂಕ 28.03.2022 ರಂದು ಮತ್ತು ದಿಃ01.04.2022 ರಂದು ಆಗಿವೆ. ಆ ರೀತಿ 2 ಆಪರೇಷನಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ಸ್ವಂತ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ತೊಂದರೆ ಆಗುತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಡಿಸಾರ್ಜ ಆದ ನಂತರ 4 ತಿಂಗಳವೆರೆಗೆ ಪಾಲೋ ಅಪ್ ಟ್ರಿಟಮೆಂಟ್‌ಗಾಗಿ ಹೋಗಿದ್ದು ನಂತರ ಹೋಗಿರುವುದಿಲ್ಲ. ನಿಮಗೆ ಯಾವುದೇ ಅಂಗ

ನ್ಯೂನ್ಯತೆ ಇಲ್ಲದಿದದರೂ ಸಹ ನೀವು ಪರಿಹಾರ ಧನ ಬರಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6. ದಿಃ22.03.2022 ರಂದು ನೀವು ನಿಮ್ಮ ಗೆಳೆಯ ಕಾಡರಕೊಪ್ಪ ಗ್ರಾಮಕ್ಕೆ ಹೋಗುತ್ತಿದ್ದು ಮುಂದಿನಿಂದ ಒಂದು ಮಹೇಂದ್ರ ಟ್ರಕ್ ಅಪಘಾತಪಡಿಸಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮ ಹೇಳಿಕೆಯಲ್ಲಿ ಸಾಯಿ ಲೀಲಾ ಆಸ್ಪತ್ರೆಯವರು ಸ್ಕ್ಯಾನ ಮಾಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ನೆನಪಿಲ್ಲ. ನೀವು ಜಿ.ಎಸ್.ಕುಲಕರ್ಣಿ ಆಸ್ಪತ್ರೆಯಲ್ಲಿ 14 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು 7 ಲಕ್ಷ ರೂಪಾಯಿ ಖರ್ಚು ಆಗಿದೆ ಎಂದು ಹಾಗೂ ಮುಂದಿನ ಚಿಕಿತ್ಸೆಗಾಗಿ 2 ಲಕ್ಷ ರೂಪಾಯಿ ಬೇಕು ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. 12 ತಿಂಗಳು ಬೆಡ್ ರೆಸ್ಟ ಹೇಳಿದ್ದರಿಂದ 5 ಲಕ್ಷ ರೂಪಾಯಿ ಸಂಪಾದನೆ ಆಗಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ವಯಸ್ಸನ್ನು ದೃಢೀಕರಿಸಲು ದಾಖಲಾತಿಗಳನ್ನು ಹಾಜರಪಡಿಸಿಲ್ಲ. ನೀವು ಯಾವುದೇ ದಾಖಲಾತಿಯನ್ನು ಹಾಜರಪಡಿಸಿಲ್ಲ, ನಿಮಗೆ 38 ವರ್ಷ ವಯಸ್ಸಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆದಾಯ ದೃಢೀಕರಿಸಲು ಯಾವುದಾದರೂ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ವಕೀಲರ ಬಳಿ ನೀಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿ ದಿನಕ್ಕೆ ರೂ.1500/- ಯಂತೆ ತಿಂಗಳಿಗೆ 45 ಸಾವಿರ ರೂಪಾಯಿ ಗಳಿಸುತ್ತಿದ್ದೆ ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಅಪಘಾತ ಆಗಿದ್ದರು ಸಹ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

1 ನೇ ಎದುರುದಾರ ಪರ ವಕೀಲರು ಗೈರು ಹಾಜರು, 1 ನೇ ಎದುರುದಾರರು ಗೈರು ಹಾಜರ ಇದ್ದು, ಪಾಟೀ ಸವಾಲಿಗೆ ಸಮಯವಕಾಶ ನೀಡಲು ಯಾವುದೇ ಸಕಾರಣಗಳಿಲ್ಲದ ಕಾರಣ 1 ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ./ಎಂ ಎ ಸಿ ಟಿ.9, ಮುಧೋಳ

<u>ದಿನಾಂಕ 11-10-2023 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
**<u>ಪಾಟೀ ಸವಾಲು ಶ್ರೀ.ಎನ್.ಬಿ.ಎಚ್ ವಕೀಲರಿಂದ 2 ನೇ ಎದುರುದಾರ ಪರ</u>**

1. ಅಪಘಾತವು ದಿಃ23.02.2022 ರಂದು ರಾತ್ರಿ 10-00 ಗಂಟೆಗೆ ಕಾಡರಕೊಪ್ಪ ರಸ್ತೆ ಎಸ್.ಬಿ.ಐ ಬ್ಯಾಂಕ ಹತ್ತಿರ ಆಯಿತು. ನಾನು ಮುಧೋಳದಿಂದ ಕಾಡರಕೊಪ್ಪ ಗ್ರಾಮಕ್ಕೆ ಹೊರಟ್ಟಿದ್ದೆ. ಅಪಘಾತಪಡಿಸಿದ ವಾಹನ ಮಹೇಂದ್ರ ಟ್ರಕ್ ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುತಿತ್ತು. ಅಪಘಾತವು ಕಾಡರಕೊಪ್ಪ - ಲೋಕಾಪೂರ ಕ್ರಾಸನಲ್ಲಿ ಆಗಿದೆ. ಕ್ರಾಸನಲ್ಲಿ ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುವ ವಾಹನ ತಿರುವು ಇದ್ದ ಕಾರಣ ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಕ್ರಾಸನಿಂದ ಸ್ವಲ್ಪ ಮುಂದೆ ಎಸ್.ಬಿ.ಐ ಬ್ಯಾಂಕ ಬಳಿ ಅಪಘಾತ ಆಯಿತು ಎಂದು ಹೇಳುತ್ತಾರೆ. ಕಾಡರಕೊಪ್ಪದಿಂದ ಲೋಕಾಪೂರಕ್ಕೆ ಬರುವಾಗ ತಿರುವು ಇದ್ದ ಕಾರಣ ನಿಧಾನವಾಗಿ ಮುಖ್ಯ ರಸ್ತೆಯಲ್ಲಿ ಸೇರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ತಿರುವು ಇಲ್ಲ, ಸರಳ ರಸ್ತೆ ಇದೆ ಎಂದು ಹೇಳುತ್ತಾರೆ.

2. ದ್ವಿಚಕ್ರ ವಾಹನವನ್ನು ರಮೇಶರವರು ಚಲಾಯಿಸುತ್ತಿದ್ದು, ನಾನು ಹಿಂಬದಿ ಸವಾರನಾಗಿ ಕುಳಿತ್ತಿದ್ದೆ. ಸದರಿ ವಾಹನ ನೋಂದಾವಣಿ ಆಗಿರಲಿಲ್ಲ, ಅದಕ್ಕೆ ವಿಮೆ ಇರಲಿಲ್ಲ ಹಾಗೂ ರಮೇಶರವರಿಗೆ ವಾಹನ ಚಾಲಯಿಸಲು ಪರವಾನಿಗೆ ಇರಲಿಲ್ಲ ಎಂದರೆ ಸರಿ. ಅಪಘಾತವಾಯಿತು ಎಂದು ಹೇಳುವ ದಿನ ನೀವು ಮತ್ತು ರಮೇಶರವರು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ರಮೇಶರವರಿಗೆ ವಾಹನ ಚಾಲಯಿಸಲು ಪರವಾನಿಗೆ ಇಲ್ಲದ ಕಾರಣ ರಮೇಶರವರಿಗೆ ವಾಹನ ಚಾಲಯಿಸಲು ಬರುವುದಿಲ್ಲ, ಆ ಕಾರಣದಿಂದ ರಮೇಶರವರ ತಪ್ಪಿನಿಂದಲೇ ಅಪಘಾತ ಆಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಪಘಾತಪಡಿಸಿದ ವಾಹನ ವೇಗವಾಗಿ ಬಂದಿತು ಎಂದು ಹೇಳುತ್ತಾರೆ. ರಮೇಶರವರು ಪೊಲೀಸ ಠಾಣೆಯಲ್ಲಿ 4 ಸಾವಿರ ರೂಪಾಯಿ ದಂಡ ಕಟ್ಟಿದ್ದೀರಿ ಎಂದರೆ ಸರಿ. ರಮೇಶರವರ ಬಳಿ ವಾಹನ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ನೊಂದಣಿ ಇಲ್ಲ ಎಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ.

3. ಸದರಿ ಅಪಘಾತವು ನಿಮ್ಮ ಪ್ರಕಾರ ಹೇಗೆ ನಡೆಯಿತು ಎಂದರೆ ಒಮ್ಮೆಲೆ ಟ್ರಕ್ ನನ್ನ ವಾಹನದ ಮೇಲೆ ಬಂದಿದ್ದರಿಂದ ಅಪಘಾತ ಆಯಿತು ಎಂದು ಹೇಳುತ್ತಾರೆ. ಮಹೇಂದ್ರ

ವಾಹನದ ಚಾಲಕನಿಗೆ ಕ್ರಮಬದ್ದ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲಎಂದು ಹೇಳುತ್ತಾರೆ. 1 ನೇ ಎದುರುದಾರ ಟ್ರಕ್ ಮಾಲೀಕ ನಿಮ್ಮ ಪರಿಚಯಸ್ಥನಾಗಿದ್ದರಿಂದ ಅಪಘಾತವು ರಮೇಶರವರ ತಪ್ಪಿನಿಂದಲೇ ಆಗಿದ್ದರು ಸಹ ವಿಮೆ ಇದೆ ಎಂದು ಪರಿಹಾರ ಧನ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

4. ನಾನು ಅಪಘಾತವಾದ ಕೂಡಲೇ ಮೊದಲು ಲೋಕಾಪೂರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮುಧೋಳದ ಸಾಯಿಲೀಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ತೀವ್ರವಾದ ಗಾಯಗಳಾದ ಕಾರಣ ಮಿರಜನ ಜಿ.ಎಸ್.ಕುಲಕರ್ಣಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದಿದ್ದೇನೆ. ಲೋಕಾಪೂರ ಸರಕಾರಿ ಅಸ್ಪತ್ರೆಯಲ್ಲಿ ನನಗೆ ಯಾವುದೇ ಚಿಕಿತ್ಸೆ ನೀಡಿಲ್ಲ. ಮುಧೋಳದ ಸಾಯಿಲೀಲಾ ಆಸ್ಪತ್ರೆಯಲ್ಲಿ ನಿಮಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸಾಕ್ಷಿಯು ಪ್ರಥಮ ಚಿಕಿತ್ಸೆ ನೀಡಿ ಸ್ಕ್ಯಾನಿಂಗ ಮಾಡಿ ಎಕ್ಸರೇ ತೆಗೆದು ಮಿರಜಗೆ ಕಳುಹಿಸಿದ್ದಾರೆ. ಸಾಯಿಲೀಲಾ ಆಸ್ಪತ್ರೆಯಲ್ಲಿ ನನಗೆ ಯಾವುದೇ ಆಪರೇಷನ್ ಮಾಡಿಲ್ಲ. ಸಾಕ್ಷಿಗೆ ಈಗ ನಿಪಿ-14 ರ ಬಿಲ್ಲುಗಳಲ್ಲಿ ದಿಃ23.03.2022 ರ ಸಾಯಿಲೀಲಾ ಆಸ್ಪತ್ರೆಯ ಬಿಲ್ಲ ಸಂಖ್ಯೆ 3527 ನ್ನು ತೋರಿಸುತ್ತಿದ್ದು ಪ್ರಥಮ ಚಿಕಿತ್ಸೆಗೆ 40 ಸಾವಿರ ರೂಪಾಯಿಯಷ್ಟು ಬಿಲ್ಲನ್ನು ಹಾಜರಪಡಿಸಿದ್ದು ಅದರಲ್ಲಿ ಸರ್ಜನ ಚಾರ್ಜ, ಪಿ.ಒ.ಒ, ಒ.ಟಿ ಚಾರ್ಜ ಇತ್ಯಾದಿ ಎಂದು ನೀವು ಖೊಟ್ಟಿ ಬಿಲ್ಲನ್ನು ಸಾಯಿಲೀಲಾ ಆಸ್ಪತ್ರೆಯೊಂದಿಗೆ ಮಿಲಾಪಿಯಾಗಿ ಖೊಟ್ಟಿಯಾಗಿ ತಯಾರಿಸಿ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಮಿರಜನಲ್ಲಿಯು ಹೆಚ್ಚಿಗೆ ಮೊತ್ತವನ್ನು ತೋರಿಸಿ ಸುಳ್ಳು ಬಿಲ್ಲನ್ನು ತಯಾರಿಸಿ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಕೇವಲ ಬಿಲ್ಲುಗಳನ್ನು ಹಾಜರಪಡಿಸಿದ್ದು, ಪ್ರಿಸಕ್ರಪಷನ್ ಹಾಜರಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಮಿರಜದಲ್ಲಿ 1 ಆಪರೇಷನ ದಿನಾಂಕ 25.03.2022 ರಂದು ಆಗಿದೆ. ಆ ರೀತಿ ಆಪರೇಷನ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ಸ್ವಂತ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ತೊಂದರೆ ಆಗುತ್ತಿದೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಡಿಸಾರ್ಜ ಆದ ನಂತರ 8 ರಿಂದ 10 ತಿಂಗಳವರೆಗೆ ಪಾಲೋ ಅಪ್ ಟ್ರಿಟಮೆಂಟ್‌ಗಾಗಿ ಹೋಗಿದ್ದು ನಂತರ ಹೋಗಿರುವುದಿಲ್ಲ. ನಿಮಗೆ ಯಾವುದೇ ಅಂಗ ನ್ಯೂನ್ಯತೆ ಇಲ್ಲದಿದದರೂ ಸಹ ನೀವು ಪರಿಹಾರ ಧನ ಬರಲಿ ಎಂದು ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6. ದಿಃ22.03.2022 ರಂದು ನೀವು ನಿಮ್ಮ ಗೆಳೆಯ ಕಾಡರಕೊಪ್ಪ ಗ್ರಾಮಕ್ಕೆ ಹೋಗುತ್ತಿದ್ದು ಮುಂದಿನಿಂದ ಒಂದು ಮಹೇಂದ್ರ ಟ್ರಕ್ ಅಪಘಾತಪಡಿಸಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮ ಹೇಳಿಕೆಯಲ್ಲಿ ಸಾಯಿ ಲೀಲಾ ಆಸ್ಪತ್ರೆಯವರು ಸ್ಕ್ಯಾನ ಮಾಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ನೆನಪಿಲ್ಲ. ನೀವು ಜಿ.ಎಸ್.ಕುಲಕರ್ಣಿ ಆಸ್ಪತ್ರೆಯಲ್ಲಿ 7 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು 4 ಲಕ್ಷ ರೂಪಾಯಿ ಖರ್ಚು ಆಗಿದೆ ಎಂದು ಹಾಗೂ ಮುಂದಿನ ಚಿಕಿತ್ಸೆಗಾಗಿ 1 ಲಕ್ಷ ರೂಪಾಯಿ ಬೇಕು ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. 6 ತಿಂಗಳು ಬೆಡ್ ರೆಸ್ಟ ಹೇಳಿದ್ದರಿಂದ 5 ಲಕ್ಷ ರೂಪಾಯಿ ಸಂಪಾದನೆ ಆಗಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ವಯಸ್ಸನ್ನು ದೃಢೀಕರಿಸಲು ದಾಖಲಾತಿಗಳನ್ನು ಹಾಜರಪಡಿಸಿಲ್ಲ. ನೀವು ಯಾವುದೇ ದಾಖಲಾತಿಯನ್ನು ಹಾಜರಪಡಿಸಿಲ್ಲ, ನಿಮಗೆ 38 ವರ್ಷ ವಯಸ್ಸಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆದಾಯ ದೃಢೀಕರಿಸಲು ಯಾವುದಾದರೂ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ವಕೀಲರ ಬಳಿ ನೀಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ತಿಂಗಳಿಗೆ 45 ಸಾವಿರ ರೂಪಾಯಿ ಗಳಿಸುತ್ತಿದ್ದೆ ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ರಮೇಶರವರ ತಪ್ಪಿನಿಂದ ಅಪಘಾತ ಆಗಿದ್ದರು ಸಹ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

1 ನೇ ಎದುರುದಾರ ಪರ ವಕೀಲರು ಗೈರು ಹಾಜರು, 1 ನೇ ಎದುರುದಾರರು ಗೈರು ಹಾಜರ ಇದ್ದು, ಪಾಟೀ ಸವಾಲಿಗೆ ಸಮಯವಕಾಶ ನೀಡಲು ಯಾವುದೇ ಸಕಾರಣಗಳಿಲ್ಲದ ಕಾರಣ 1 ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ./ಎಂ ಎ ಸಿ ಟಿ.9, ಮುಧೋಳ